# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 429 (483) |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16/09/2021 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು ಕಟ್ಟಡ ಕಾರ್ಮಿಕರನ್ನು ನೋಂದಣಿ ಮಾಡುವಾಗ ಅಳವಡಿಸುವ ಮಾನದಂಡಗಳೇನು; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಫಲಾನುಭವಿಯಾಗಿ ನೋಂದಣಿಯಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಖ್ಯೆ: 30.39 ಲಕ್ಷ ಇರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಲು ಅನುಸರಿಸಬೇಕಾದ ಮಾನದಂಡಗಳು ಈ ಕೆಳಕಂಡಂತಿದೆ.<br><br>1. ವಯೋಮಿತಿ: 18 ರಿಂದ 60 ವರ್ಷದೊಳಗಿರಬೇಕು<br>2. ನೋಂದಣಿ ಮಾಡುವ ಕಛೇರಿಗಳು: ಕಾರ್ಮಿಕ ಅಧಿಕಾರಿಗಳು/ ಹಿರಿಯಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಮುಖ್ಯ ಅಭಿಯಂತರರು<br><br>ನೋಂದಣಿಗಾಗಿ ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:<br>ಎ) ನಮೂನೆ-V-1ರಲ್ಲಿ ಅರ್ಜಿ<br>ಬಿ) ಕಾಮಗಾರಿ ನಡೆಯುವ ಕಟ್ಟಡದ ಮಾಲೀಕರು/ ಗುತ್ತಿಗೆದಾರರು, CREDAI (Confederation of Real Estate Developers Association of India), BAI (Builders Association of India) ಅಥವಾ ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ರವರು ನಮೂನೆ- V(A)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ನೋಂದಾಯಿತ ಕಾರ್ಮಿಕ ಸಂಘಗಳು ನಮೂನೆ- V(B)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಕಾರ್ಮಿಕ ಅಧಿಕಾರಿ / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ |

| | | |
|---|---|---|
| | | ನಿರೀಕ್ಷಕರು ನಮೂನೆ-V(C)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ' ಅಥವಾ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ನಮೂನೆ-V(D)ರಲ್ಲಿ ನೀಡುವಂತಹ 'ಉದ್ಯೋಗದ ದೃಢೀಕರಣ ಪತ್ರ'<br>ಸಿ) ಮೂರು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು<br>ಡಿ) ವಯಸ್ಸಿನ ದೃಢೀಕರಣ ಪತ್ರ: ಶಾಲಾ ದಾಖಲಾತಿ, ವಾಹನ ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಎಪಿಕ್‌ಕಾರ್ಡ್, ಆಧಾರ್‌ಕಾರ್ಡ್, ಎಲ್‌ಐಸಿ ವಿಮೆ ಪಾಲಿಸಿ ಅಥವಾ ಗ್ರಾಮ ಲೆಕ್ಕಿಗರು ಅಥವಾ ಕಂದಾಯ ನಿರೀಕ್ಷಕರು ಅಥವಾ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಅಥವಾ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಂದ ವಿತರಿಸಿದ ಪ್ರಮಾಣ ಪತ್ರ ಅಥವಾ ಸರ್ಕಾರಿ ಆಸ್ಪತ್ರೆ/ ಇಎಸ್‌ಐ ಆಸ್ಪತ್ರೆ/ ಸ್ಥಳೀಯ ಸಂಸ್ಥೆಗಳ ಆಸ್ಪತ್ರೆ ಅಥವಾ ನೋಂದಾಯಿತ ಎಂಬಿಬಿಎಸ್, ಆಯುರ್ವೇದ, ಯುನಾನಿ ಅಥವಾ ಹೋಮಿಯೋಪತಿ ವೈದ್ಯರು, ನೋಂದಾಯಿತ ಖಾಸಗಿ ಬಿ.ಡಿ.ಎಸ್ ವಿದ್ಯಾರ್ಹತೆ ಹೊಂದಿದ ದಂತ ವೈದ್ಯರಿಂದ ಪ್ರಮಾಣ ಪತ್ರ ಇವುಗಳಲ್ಲಿ ಯಾವುದಾದರೊಂದು ದಾಖಲೆ. |
| ಆ) | ಅನಧಿಕೃತ ಸಂಘಗಳು ನೈಜ ಕಟ್ಟಡ ಕಾರ್ಮಿಕರನ್ನು ಬಿಟ್ಟು ಇತರೆ ಜನರನ್ನು ನೋಂದಾಯಿಸಿ ಇಲಾಖೆಗೆ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಮತ್ತು ಕರ್ನಾಟಕ ನಿಯಮಗಳು 2006 ರಲ್ಲಿ ನಿಗಧಿಪಡಿಸಿರುವ ಅರ್ಹತ ಮಾನದಂಡಗಳನ್ವಯ ಕಟ್ಟಡ ಕಾರ್ಮಿಕರನ್ನು ಫಲಾನುಭವಿಗಳಾಗಿ ಸೇವಾ ಸಿಂಧು ತಂತ್ರಾಂಶದ ಮೂಲಕ ನೋಂದಾಯಿಸಕೊಳ್ಳಲಾಗುತ್ತಿದೆ. ಕಾಯ್ದೆ ಮತ್ತು ನಿಯಮಗಳಲ್ಲಿ ನಿಗಧಿಪಡಿಸಿರುವ ಫಲಾನುಭವಿಗಳ ಅರ್ಜಿಗಳನ್ನು ನೋಂದಣಾಧಿಕಾರಿಗಳಾದ ಕಾರ್ಮಿಕ ನಿರೀಕ್ಷಕರು ಪರಿಶೀಲಿಸಿ ನೋಂದಾಯಿಸುತ್ತಾರೆ. |
| ಇ) | ಕಳೆದ 3 ವರ್ಷಗಳಲ್ಲಿ ಕಟ್ಟಡ ಕಾರ್ಮಿಕರ ನಿಧಿಯಲ್ಲಿರುವ ಮೊತ್ತವೆಷ್ಟು; ಕಳೆದ ವರ್ಷ ಹಾಗೂ ಪ್ರಸ್ತುತ ವರ್ಷದಲ್ಲಿ ಕಟ್ಟಡ ಕಾರ್ಮಿಕರಿಗೆ ನೀಡಲಾದ ವಿಶೇಷ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಮಂಡಳಿಯ ಸುಂಕ ನಿಧಿಯಲ್ಲಿ ರೂ.3841.95 ಕೋಟಿ ಮೊತ್ತವು ಲಭ್ಯವಿರುತ್ತದೆ.<br>2020 ರಲ್ಲಿ ಕೋವಿಡ್ ಮೊದಲನೇ ಅಲೆ ಸಂದರ್ಭದಲ್ಲಿ ನೋಂದಾಯಿತರಾಗಿದ್ದ 21.78 ಲಕ್ಷ ಕಾರ್ಮಿಕರಲ್ಲಿ 16.48 ಲಕ್ಷ ಫಲಾನುಭವಿಗಳಿಗೆ ತಲಾ ರೂ.5,000/-ಗಳಂತೆ ಒಟ್ಟು ರೂ. 824.21 ಕೋಟಿ ಸಹಾಯಧನವನ್ನು ನೇರ ನಗದು ವರ್ಗಾವಣೆ (DBT) ಮೂಲಕ ವಿತರಣೆ ಮಾಡಲಾಗಿರುತ್ತದೆ. |

| | | |
|---|---|---|
| | | 2021 ರಲ್ಲಿ ಕೋವಿಡ್ 2ನೇ ಅಲೆ ಸಂದರ್ಭದಲ್ಲಿ ತಲಾ ರೂ.3,000/- ಗಳಂತೆ 26.92 ಲಕ್ಷ ನೋಂದಾಯಿತ ಕಾರ್ಮಿಕರಲ್ಲಿ ಇಲ್ಲಿಯವರೆಗೆ 18.20 ಲಕ್ಷ ಕಾರ್ಮಿಕರಿಗೆ ಒಟ್ಟು ರೂ.546.29 ಕೋಟಿ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್‌ಖಾತೆಗೆ ನೇರ ನಗದು ವರ್ಗಾವಣೆ (DBT) ಮೂಲಕ ಜಮಾ ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯ ವಿವರವನ್ನು **ಅನುಬಂಧ-1** ಮತ್ತು **ಅನುಬಂಧ-2** ರಲ್ಲಿ ಲಗತ್ತಿಸಿದೆ. |
| ಈ) | ಮುಂದಿನ ದಿನಗಳಲ್ಲಿ ಕಟ್ಟಡ ಕಾರ್ಮಿಕರ ನೋಂದಣಿಗೆ ಸರಿಯಾದ ಮಾರ್ಗ ಸೂಚಿಗಳನ್ನು ಹೊರಡಿಸಿ ಅನುಷ್ಠಾನಗೊಳಿಸಲಾಗುವುದೇ; | ಕಟ್ಟಡ ಕಾರ್ಮಿಕರ ನೋಂದಣಿ ಮಾಡಲು ವಿಶೇಷ ತಂತ್ರಾಂಶವನ್ನು ಮಂಡಳಿ ವತಿಯಿಂದ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳನ್ವಯ ನೋಂದಣಿಗೆ ಕ್ರಮ ವಹಿಸಲಾಗುತ್ತಿದೆ. |
| ಉ) | ಕಟ್ಟಡ ಕಾರ್ಮಿಕರಿಗೆ ನೀಡಲಾದ ಒಟ್ಟು ಆಹಾರ ಕಿಟ್‌ಗಳು ಎಷ್ಟು; ಒಂದು ಕೆಜಿಗೆ ವೆಚ್ಚವಾದ ಹಣವೆಷ್ಟು; ಪ್ರತಿ ಶಾಸಕರಿಗೆ ಎಷ್ಟು ಆಹಾರ ಕಿಟ್ ವಿತರಿಸಲು ನೀಡಲಾಯಿತು; ಇದರಲ್ಲಿ ಸಮಾನತೆಯನ್ನು ಕಾಪಾಡಲಾಗಿದೆಯೇ? (ವಿವರ ನೀಡುವುದು) | ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 23.07 ಲಕ್ಷ ಆಹಾರ ಕಿಟ್ ವಿತರಿಸಲಾಗಿರುತ್ತದೆ. ಒಂದು ಆಹಾರ ಧಾನ್ಯದ ಕಿಟ್‌ಗೆ ರೂ.835/- ಮೊತ್ತ ನಿಗಧಿಯಾಗಿರುತ್ತದೆ.<br>ಅಸಂಘಟಿತ ಕಾರ್ಮಿಕರಿಗೆ 3.80 ಲಕ್ಷ ಆಹಾರದ ಕಿಟ್‌ಗಳನ್ನು ವಿತರಣೆ ಮಾಡಲಾಗಿದ್ದು, ಒಂದು ಆಹಾರ ಕಿಟ್‌ಗೆ ರೂ.573/- ಮೊತ್ತ ನಿಗಧಿಯಾಗಿರುತ್ತದೆ,<br>ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ಸಮರ್ಪಕವಾಗಿ ಮತ್ತು ಅರ್ಹ ಕಾರ್ಮಿಕರಿಗೆ ಪಾರದರ್ಶಕವಾಗಿ ಹಾಗೂ ನಿಜವಾದ ಕಾರ್ಮಿಕರಿಗೆ ತಲುಪಿಸುವ ಸದುದ್ದೇಶದಿಂದ |
| | | ಸರ್ಕಾರ, ನ್ಯಾಯಾಲಯಗಳ ಸೂಚನೆಗಳನ್ನು ಒಳಗೊಂಡ ಮಾರ್ಗಸೂಚಿಯನ್ನು (Standard Operating Procedure) ದಿನಾಂಕ: 05-06-2021 ರಂದು ಹೊರಡಿಸಿ ಇದರನ್ವಯ ಕ್ರಮಕೈಗೊಳ್ಳಲು ಹಾಗೂ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅದರ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ.<br>1) ಕ್ಷೇತ್ರ ಮಟ್ಟದ ಅಧಿಕಾರಿಗಳು ಕಿಟ್‌ಗಳನ್ನು ಸ್ವೀಕರಿಸಿದ ನಂತರ ರ‍್ಯಾಡಂ ಆಗಿ ಒಂದೆರಡು ಕಿಟ್‌ಗಳನ್ನು ತೆರೆದುಅದರಲ್ಲಿ ಒದಗಿಸಿರುವ ಸಾಮಾಗ್ರಿಗಳು ಮಂಡಳಿಯು ನಿಗಧಿಪಡಿಸಿರುವ ಮಾನದಂಡಗಳು / Specifications, ಗುಣಮಟ್ಟ ಹಾಗೂ ಪ್ರಮಾಣದ ಬಗ್ಗೆ ಖಾತರಿಪಡಿಸಿಕೊಳ್ಳುವುದು.<br>2) ಸರಬರಾಜುದಾರರು ಸದರಿ ಸಾಮಾಗ್ರಿಗಳ ಕಿಟ್‌ಗಳನ್ನು ಕಾರ್ಯಾದೇಶದಲ್ಲಿ ನೀಡಿದ ಸಂಖ್ಯೆಗೆ |

ಅನುಗುಣವಾಗಿ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಪೂರೈಕೆ ಮಾಡಿದ ಬಗ್ಗೆ ಕಾರ್ಮಿಕ ಅಧಿಕಾರಿಗಳು ದೃಢೀಕೃತ ಪ್ರಮಾಣ ಪತ್ರದ ಒಂದು ಪ್ರತಿಯನ್ನು ಸರಬರಾಜುದಾರರಿಗೆ ಹಾಗೂ ಒಂದು ಪ್ರತಿಯನ್ನು ನೇರವಾಗಿ ಮಂಡಳಿಗೆ ಸಲ್ಲಿಸತಕ್ಕದ್ದು.

3) ಕಿಟ್‌ಗಳನ್ನು ವಿತರಿಸುವಾಗ ಫಲಾನುಭವಿಗಳ ವಿವರಗಳನ್ನು ಲಗತ್ತಿಸಿರುವ ನಮೂನೆಗಳಲ್ಲಿ ನಿರ್ವಹಿಸುವುದು. ಸಂದರ್ಭಾನುಸಾರ ಕೆಲವು ಫಲಾನುಭವಿಗಳಿಗೆ ಕಿಟ್‌ಗಳನ್ನು ವಿತರಿಸುವ ವೀಡಿಯೋ/ ಫೋಟೋಗಳನ್ನು ತೆಗೆಯುವುದು.

4) ಕಿಟ್‌ಗಳನ್ನು ನೋಂದಾಯಿತ ಕಾರ್ಮಿಕರು ಮತ್ತು ವಲಸೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡುವುದು.

5) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಬೆಂಗಳೂರು ಪ್ರಾದೇಶಿಕದಲ್ಲಿ ಸಂಪರ್ಕ್ ಎನ್ನುವ ಸರ್ಕಾರೇತರ ಸಂಸ್ಥೆಯ ಮೂಲಕ ಆಯ್ದ 70 ನಿರ್ಮಾಣ ಸ್ಥಳಗಳಲ್ಲಿ ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳು/ ಹಿರಿಯ ಕಾರ್ಮಿಕ ನಿರೀಕ್ಷಕರ ಮುಖಾಂತರ ವಿತರಣೆ ಮಾಡುವುದು.

6) ಸರಬರಾಜುದಾರರು ಕಿಟ್‌ಗಳನ್ನು ತಯಾರಿಸುವ ಗೋಡನ್‌ಗಳ ವಿವರಗಳನ್ನು ತಮಗೆ ತಿಳಿಸಲಿದ್ದು, ಸದರಿ ಸ್ಥಳಗಳಲ್ಲಿ ತಮ್ಮ ಕಛೇರಿ ವ್ಯಾಪ್ತಿಯ ಸಿಬ್ಬಂದಿಗಳನ್ನು ನಿಯೋಜಿಸಿ ಕಾರ್ಯಾದೇಶಗಳಲ್ಲಿ ತಿಳಿಸುವಂತಹ ಎಲ್ಲಾ ಸಾಮಾಗ್ರಿಗಳನ್ನು ಕಿಟ್‌ಗಳಲ್ಲಿ ಇಡುತ್ತಿರುವ ಬಗ್ಗೆ ಮತ್ತು ಕಿಟ್‌ಗಳನ್ನು ಸಂಬಂಧಪಟ್ಟ ಕಛೇರಿಗಳಿಗೆ ಪೂರೈಸುವಂತಹ ದಿನನಿತ್ಯದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳತಕ್ಕದ್ದು. ಅಲ್ಲದೇ, ಸದರಿ ಸ್ಥಳಗಳಿಗೆ ಅಧಿಕಾರಿಗಳು ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸುವುದು.

7) ಮಂಡಳಿಯಿಂದ ಒದಗಿಸಲಾಗುವ ಯಾವುದೇ ರೀತಿಯ ಕಿಟ್ ವಿತರಣೆಯ ನಿರ್ವಹಣೆಗೆ ಉಪ ಕಾರ್ಮಿಕ ಆಯುಕ್ತರು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರ ವಾಟ್ಸ್‌ಪ್ ಗುಂಪನ್ನು ರಚಿಸಲಾಗಿದ್ದು, ದೈನಂದಿನ ಪ್ರಮುಖ ಚಟುವಟಿಕೆಗಳ ಕಾರ್ಯಗಳನ್ನು ವಾಟ್ಸ್‌ಪ್ ಗುಂಪಿನಲ್ಲಿ ಹಾಕುವುದು.

8) ಕಿಟ್‌ಗಳನ್ನು ಪಾರದರ್ಶಕವಾಗಿ ವಿತರಿಸಿದ ಬಗ್ಗೆ ಫೋಟೋ/ ವೀಡಿಯೋ ಹಾಗೂ ನಿಗದಿತ ನಮೂನೆಯಲ್ಲಿ ಸೂಕ್ತ ಮಾಹಿತಿಯನ್ನು ನಿರ್ವಹಿಸತಕ್ಕದ್ದು. ಸದರಿ ಫೋಟೋಗಳ 02

| | | |
|---|---|---|
| | | ಆಲ್ಬಂಗಳನ್ನು ಹಾಗೂ ವೀಡಿಯೊಗಳ 02 ಸಿಡಿಗಳನ್ನು ತಯಾರಿಸುವುದು. 01 ಸಿಡಿ ಮತ್ತು 01 ಆಲ್ಬಂನ್ನು ಕಾರ್ಮಿಕ ಅಧಿಕಾರಿಗಳು ತಮ್ಮ ಕಛೇರಿಯಲ್ಲಿ ನಿರ್ವಹಿಸಿ ಇನ್ನೊಂದು ಪ್ರತಿಯನ್ನು ಮಂಡಳಿಗೆ ಕಳುಹಿಸುವುದು.<br>9) ಸದರಿ ಕಿಟ್‌ಗಳನ್ನು ಜನ ಪ್ರತಿನಿಧಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಮ್ಮುಖದಲ್ಲಿ ನೋಂದಾಯಿತ ಕಾರ್ಮಿಕ ಸಂಘ ಸಂಸ್ಥೆಗಳು ಇದ್ದಲ್ಲಿ ಅವರ ಸಹಯೋಗದೊಂದಿಗೆ ವಿತರಿಸತಕ್ಕದ್ದು.<br>10) ಸರಬರಾಜುದಾರರು ಪೂರೈಕೆ ಮಾಡುವ ಕಿಟ್‌ಗಳ ಗುಣಮಟ್ಟ ಮತ್ತು ಪ್ರಮಾಣದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಕೂಡಲೇ ಮಂಡಳಿಗೆ ತಿಳಿಸತಕ್ಕದ್ದು.<br>ಮುಂದುವರೆದು, ಆಹಾರ ಸಾಮಾಗ್ರಿ ಕಿಟ್‌ಗಳ ವಿತರಣೆ ಮತ್ತು ಬೇಡಿಕೆಯ ಕುರಿತು ಕಾರ್ಮಿಕ ಆಯುಕ್ತರು ಹಾಗೂ ಮಂಡಳಿಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಪ್ರತಿ ವಾರ ವಿಡೀಯೋ ಕಾನ್ಫರೇನ್ಸ್ ಮುಖಾಂತರ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತಿರುತ್ತದೆ. ಸರಬರಾಜುದಾರರಿಂದ ಸ್ವೀಕರಿಸಿದ ಆಹಾರ ಸಾಮಾಗ್ರಿಗಳನ್ನು ಸರ್ಕಾರಿ ಸ್ವಾಮ್ಯದ ಗೋಡನ್, ಎಪಿಎಂಸಿ ಗೋಡನ್ ಮತ್ತು ಖಾಸಗಿ ಕಲ್ಯಾಣ ಮಂಟಪಗಳು/ ಸಮುದಾಯ ಭವನಗಳನ್ನು ಇಲಾಖೆಯ ವಶಕ್ಕೆ ಪಡೆದು ಶೇಖರಿಸಿಡಲು ನಿರ್ಧರಿಸಲಾಗಿರುತ್ತದೆ. ಕ್ಷೇತ್ರ ಮಟ್ಟದಲ್ಲಿ ಕಿಟ್ ವಿತರಣೆಯನ್ನು ಜನ ಪ್ರತಿನಿಧಿಗಳು, ನ್ಯಾಯಾಧೀಶರು ಮತ್ತು ಸಂಘ ಸಂಸ್ಥೆಗಳ ಸಹಕಾರ ಪಡೆದು ವಿತರಣೆ ಮಾಡಲಾಗುತ್ತಿರುತ್ತದೆ. |

**ಕಾಇ 381 ಎಲ್‌ಇಟಿ 2021**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

# Annexure-1

| District wise Details of Registered BOC Workers of the KBOCWWB who have been Credited with Rs.5000 during COVID-19 as on 21.09.2020 | | | | |
|---|---|---|---|---|
| Sl No. | District | Payment Done from Board Through DBT Aadhaar | Payment Done From Board Through NEFT | payment done From Labour Officer's |
| 1 | Bagalkote | 15579 | 3393 | 10555 |
| 2 | Belgaum | 41674 | 11281 | 17026 |
| 3 | Ballary | 45372 | 4036 | 33433 |
| 4 | Bengalore | 36357 | 5378 | 42032 |
| 5 | Bidar | 43651 | 5117 | 22846 |
| 6 | Bijapur | 17613 | 3773 | 24239 |
| 7 | Chamarajnagar | 40290 | 1117 | 13252 |
| 8 | Chikkaballapur | 15980 | 1031 | 6735 |
| 9 | Chikkamagalur | 19550 | 9040 | 6139 |
| 10 | Chitradurga | 60049 | 3927 | 14556 |
| 11 | Davanagere | 58869 | 3194 | 22245 |
| 12 | Gadag | 11999 | 5102 | 6748 |
| 13 | Hassan | 54320 | 3401 | 15182 |
| 14 | Haveri | 13247 | 11138 | 19991 |
| 15 | Hubli | 48299 | 7813 | 20973 |
| 16 | Gulbarga | 40707 | 6335 | 37875 |
| 17 | Karwar | 47485 | 13792 | 17664 |
| 18 | Kolar | 44575 | 726 | 21288 |
| 19 | Koppal | 65794 | 5757 | 5348 |
| 20 | Madikeri | 951 | 468 | 1443 |
| 21 | Mandya | 24824 | 1643 | 14622 |
| 22 | Mangalore | 35657 | 7593 | 13132 |
| 23 | Mysore | 34030 | 2852 | 28120 |
| 24 | Raichur | 38789 | 2080 | 13279 |
| 25 | Ramnagar | 9638 | 1059 | 18393 |
| 26 | Shimoga | 92815 | 7055 | 13569 |
| 27 | Tumkur | 23338 | 2317 | 15527 |
| 28 | Udupi | 17430 | 7409 | 7759 |
| 29 | Yadgiri | 15774 | 4269 | 7708 |
| | Total | 10,14,656 | 1,42,096 | 4,91,679 |
| | Grand Total | 16,48,431 | | |
| | Total Amount Disbursed | 824,21,55,000 | | |

## ಅನುಬಂಧ-2

| District wise Registered Construction workers who have been credited with Rs.3000/-during second wave of COVID-19 | | |
|---|---|---|
| **DISTRICT NAME** | **No. of Beneficiary who have been credited Rs.3000/-** | **Total Amount Disbursed** |
| BAGALKOT | 52936 | 158808000 |
| BANGALORE | 146087 | 438261000 |
| BELGAUM | 97921 | 293763000 |
| BELLARY | 56473 | 169419000 |
| BIDAR | 132521 | 397563000 |
| BIJAPUR | 56954 | 170862000 |
| CHAMARAJA NAGAR | 28468 | 85404000 |
| CHIKBALLAPUR | 21557 | 64671000 |
| CHIKMAGALUR | 49502 | 148506000 |
| CHITRADURGA | 61299 | 183897000 |
| DAKSHINA KANNADA | 44108 | 132324000 |
| DAVANAGERE | 78623 | 235869000 |
| DHARWAD | 68652 | 205956000 |
| GADAG | 36707 | 110121000 |
| HASSAN | 64794 | 194382000 |
| HAVERI | 102258 | 306774000 |
| GULBARGA | 149826 | 449478000 |
| KODAGU | 3372 | 10116000 |
| KOLAR | 49204 | 147612000 |
| KOPPAL | 63682 | 191046000 |
| MANDYA | 17986 | 53958000 |
| MYSORE | 59011 | 177033000 |
| RAICHUR | 34834 | 104502000 |
| RAMANAGARAM | 25709 | 77127000 |
| SHIMOGA | 79325 | 237975000 |
| TUMKUR | 46150 | 138450000 |
| UDUPI | 29882 | 89646000 |
| UTTARA KANNADA | 55190 | 165570000 |
| YADGIRI | 52570 | 157710000 |
| Yet to filter with the District | 55102 | 165306000 |
| Total | 18,20,703 | 546,21,09,000 |